ಕೊಡಗು ಏಕೀಕರಣ ರಂಗ(ರಿ)
ಕೇಂದ್ರ ಸಮಿತಿ, ಮೊದಲನೇ ಮಹಡಿ, ಕಾಲೇಜು ರಸ್ತೆ, ಮಡಿಕೇರಿ-571201

---

ದಿನಾಂಕ: 20-03-2026

**ಪ್ರಕಟಣೆಯ ಕೃಪೆಗಾಗಿ**

ಕೊಡಗು ಜಿಲ್ಲೆಯ ವಿವಿಧ ಜನಸಮುದಾಯಗಳ ಪ್ರಾತಿನಿಧಿಕ ಸಂಘಟನೆಯಾದ ಕೊಡಗು ಏಕೀಕರಣ ರಂಗ ಜಿಲ್ಲೆಯ ದೇವರಕಾಡು ಮತ್ತು ದೈವನೆಲೆಗಳ ಪಾವಿತ್ರ್ಯತೆ ಮತ್ತು ಅವುಗಳ ಆಸ್ತಿಪಾಸ್ತಿಯ ಸಂರಕ್ಷಣೆಗೆ ಶ್ರಮಿಸುತ್ತಾ ಬಂದಿದೆ.

ಈ ಹಿಂದೆ 2012-13ರಲ್ಲಿ ಕೊಡಗು ಏಕೀಕರಣ ರಂಗ ಜಿಲ್ಲೆಯ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆಯ ವಶದಲ್ಲಿರುವ ದೇವಾಲಯಗಳ ಜಮೀನಿನ ಒತ್ತುವರಿಯ ತೆರವಿಗೆ ಮನವಿ ಸಲ್ಲಿಸಿತ್ತು. ಈ ಬಗ್ಗೆ ಭೂಮಾಪನ ಇಲಾಖೆ ಸಮಗ್ರವಾದ ವರದಿ ಸಲ್ಲಿಸಿತ್ತು. ಆ ವರದಿಯಲ್ಲಿ ಕಂಡುಬಂದ ಭಾಗಮಂಡಲದ ಶ್ರೀಭಗಂಡೇಶ್ವರ ದೇವಾಲಯದ ಜಮೀನಿನ ಒತ್ತುವರಿಯನ್ನು ತರೆವುಗೊಳಿಸುವಂತೆ ಕೊಡಗು ಏಕೀಕರಣ ರಂಗ ಸಾಕಷ್ಟು ಬಾರಿ ಸರಕಾರದ ಮೇಲೆ ಒತ್ತಡ ಹೇರಿತ್ತು. ಆದರೆ ಕ್ರಮೇಣ ಪಟ್ಟಭದ್ರರ ಗುಂಪು ಸರಕಾರಿ ಮಟ್ಟದಲ್ಲಿ ಈ ಕಡತವನ್ನೇ ಇಲ್ಲದಂತೆ ಮಾಡಿತ್ತು.

ಕೊಡಗು ಏಕೀಕರಣ ರಂಗ ಮತ್ತೆ ದಿನಾಂಕ: 23/01/2023 ರಂದು ಈ ಬಗ್ಗೆ ಕರ್ನಾಟಕ ಲೋಕಾಯುಕ್ತರಿಗೆ ದೂರು ನೀಡಿತ್ತು. ಈ ದೂರನ್ನು ಆಧರಿಸಿ ಕರ್ನಾಟಕ ಲೋಕಾಯುಕ್ತರು ನೀಡಿದ ಸೂಚನೆಯಂತೆ ಭೂದಾಖಲೆಗಳ ಸಹಾಯಕ ನಿರ್ದೇಶಕರು ಭಾಗಮಂಡಲ ಹೋಬಳಿಯಲ್ಲಿನ ಭಾಗಮಂಡಲ, ತಾವೂರು ಮತ್ತು ತಣ್ಣಿಮಾನಿ ಗ್ರಾಮಗಳಲ್ಲಿರುವ ಶ್ರೀ ಭಗಂಡೇಶ್ವರ- ತಲಕಾವೇರಿ ದೇವಾಲಯಗಳಿಗೆ ಸೇರಿದ ಜಮೀನಿನ ಸರ್ವೇಮಾಡಿ ಒತ್ತುವರಿಯ ಪ್ರಮಾಣವನ್ನು ಗುರುತಿಸಿ ಶ್ರೀ ಭಗಂಡೇಶ್ವರ- ತಲಕಾವೇರಿ ಹಾಗೂ ಸಮೂಹ ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವರದಿ ಸಲ್ಲಿಸಿದ್ದಾರೆ. ಈ ವರದಿಯನ್ವಯ ಒತ್ತುವರಿಗೊಳಗಾದ ಜಮೀನಿನ ವಿವರ ಮತ್ತು ಒತ್ತುವರಿದಾರರ ಹೆಸರು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| **ಗ್ರಾಮ** | **ಸರ್ವೆ ನಂ** | **ವಿಸ್ತೀರ್ಣ (ಎಕರೆ ಮತ್ತು ಸೆಂಟ್ಸ್)** | **ಒತ್ತುವರಿದಾರರ ಹೆಸರು** |
|---|---|---|---|
| ಭಾಗಮಂಡಲ | 73/1 | 60.63 | 1.ನಾರಾಯಣ ಆಚಾರ್<br>2.ಸುಕುಮಾರಭಟ್<br>3.ನಿಡುಮಲೆ ಪ್ರಭಾಕರ<br>4.ನಿಡುಮಲೆ ರವಿ<br>5.ನಿಡುಮಲೆ ದಾಮೋದರ<br>6.ನಿಡುಮಲೆ ಸುರೇಶ<br>7.ನಿಡುಮಲೆ ನೀಲಾಧರ<br>8.ನಿಡುಮಲೆ ತೇಜಸ್<br>9.ನಿಡುಮಲೆ ಅಶೋಕ<br>10.ನಿಡುಮಲೆ ವೇಲಾನಂದ<br>11.ನಿಡುಮಲೆ ವಾಸುದೇವ<br>12.ನಿಡುಮಲೆ ಅರುಣ<br>13.ನಿಡುಮಲೆ ಪುರುಷೋತ್ತಮ |

| | | | |
|---|---|---|---|
| | | | 14.ಮೂಲೆಮಜಲು ಚಿದಾನಂದ<br>15.ವಿನೋದ ಕೇರಳ ರೆಸಾರ್ಟ್ |
| ಭಾಗಮಂಡಲ | 85/7<br>&<br>86 | 43.64<br><br>0.18 | 1. ನಿಡುಮಲೆ ರವಿ<br>2. ನಿಡುಮಲೆ ಪ್ರಭಾಕರ<br>3. ನಿಡುಮಲೆ ಅನುರಾಜ<br>4. ನಿಡುಮಲೆ ಆನಂದ<br>5. ನಿಡುಮಲೆ ಪೂವಯ್ಯ<br>6. ನಿಡುಮಲೆ ಯೋಗೇಂದ್ರ<br>7. ನಿಡುಮಲೆ ನೀಲಾಧರ |
| ಭಾಗಮಂಡಲ | 48/1 | 7.20 | ತಮ್ಮಣ್ಣ ಮತ್ತು ಗಣಪತಿ |
| ತಣ್ಣಿಮಾನಿ | 91/2 | 5.32 | ಕುದುಕುಳಿ ಬಾಲಕೃಷ್ಣ, ದಿಲೀಪ್ |
| ತಾವೂರು | 94/8 | 3.06 | 1.ನಿಡುಮಲೆ ವಾಸುದೇವ &<br>2.ಸೂರ್ಯನಾರಾಯಣ ವೈದ್ಯ |
| ತಾವೂರು | 96/2 | 0.44 | ಸೂರ್ಯನಾರಾಯಣ ವೈದ್ಯ |
| ತಾವೂರು | 97/2 | 0.06 | ಜಯಂತ್ ರೈ |
| ತಾವೂರು | 94/15 | 6.70 | ಜಯಂತ್ ರೈ ಮತ್ತು ಇತರರು |
| ತಾವೂರು | 94/6 | 13.20 | ಜಯಂತ್ ರೈ ಮತ್ತು ದೇವಗುಂಡಿ ಹರೀಶ್ |
| ತಾವೂರು | 94/12 | 2.40 | ಸತ್ಯನಾರಾಯಣ ಭಟ್ |
| ತಣ್ಣಿಮಾನಿ | 51/1 | 9.35 | 1.ಕಿರಂದಾಡು ಮುಕ್ಕಾಟಿ ಈರಪ್ಪ,<br>2.ಕುದುಪಾಜೆ ಜನಾರ್ಧನ ಮತ್ತು<br>3.ಅಣ್ಣಯ್ಯ, ಪುರುಷೋತ್ತಮ,<br>4.ಬೆಳವಾಡಿ ಲಿಂಗಪ್ಪ, ರಮೇಶ್ ರೈ |
| ತಣ್ಣಿಮಾನಿ | 40/1 | 2.85 | ಕುದುಪಾಜೆ ಲಕ್ಷ್ಮಣ, ಕುದುಪಾಜೆ ಪುರುಷೋತ್ತಮ |
| ತಣ್ಣಿಮಾನಿ | 96 | 1.47 | ಕುದುಪಾಜೆ ಕುಟುಂಬಸ್ಥರು |
| ಚೇರಂಗಾಲ | 56/2 | 0.91 | ಡಿಂಪಲ್ |
| ತಣ್ಣಿಮಾನಿ | 49/1 | - | ಬೈತಡ್ಕ ಕುಟುಂಬಸ್ಥರು |
| ಚೇರಂಗಾಲ | 53/2 | 0.91 | ಪಾಂಡಿ ರಾಘವಯ್ಯ |

ಈ ಮಾಹಿತಿಗೆ ಪೂರಕವಾಗಿ ಶ್ರೀ ಭಗಂಡೇಶ್ವರ- ತಲಕಾವೇರಿ ಹಾಗೂ ಸಮೂಹ ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿಯಿಂದ ಮಾಹಿತಿ ಹಕ್ಕು ಕಾಯಿದೆಯಡಿ ಪಡೆದ ದಾಖಲೆಗಳನ್ನು ಇಲ್ಲಿ ಲಗತ್ತಿಸಲಾಗಿದೆ.

ಈ ಸರ್ವೆ ನಡೆಸಿದ ಭೂದಾಖಲೆಗಳ ಇಲಾಖೆ ಒತ್ತುವರಿದಾರಿಗೆ ಒತ್ತಾಸೆ ನೀಡಲು ತಂತ್ರ ನಡೆಸಿದೆ. ಭಾಗಮಂಡಲದ ಅಸುಪಾಸಿನಲ್ಲಿ ನಿಡುಮಲೆ ಎಂಬ ಕುಟುಂಬವೇ ಇಲ್ಲ. ಆದರೆ ಒತ್ತುವರಿದಾರರನ್ನು ರಕ್ಷಿಸಲು ಹೊಸ ಮನೆಯ ಹೆಸರನ್ನೇ ಭೂದಾಖಲೆಗಳ ಇಲಾಖೆ ಹುಟ್ಟುಹಾಕಿದೆ.

ಅದೇ ರೀತಿಯಲ್ಲಿ ಸೋಮವಾರಪೇಟೆ ತಾಲೂಕು ಅಂಜನಗೇರಿ ಬೆಟ್ಟಗೇರಿ ಗ್ರಾಮದ ಶ್ರೀ ಬೆಳ್ಳಾರಿಕಮ್ಮ ದೇವಾಲಯಕ್ಕೆ ಸೇರಿದ ಬಸ್ತಿ ದೇವರುಕಾಡು ಮತ್ತು ಅಯ್ಯಪ್ಪ ದೇವರಕಾಡಿನ ಒತ್ತುವರಿಯನ್ನು ತೆರವುಗೊಳಿಸುವಂತೆ ಕೊಡಗು ಏಕೀಕರಣ ರಂಗ ಕುಶಾಲನಗರ ಪ್ರಾದೇಶಿಕ

ವಲಯದ ವಲಯ ಅರಣ್ಯಾಧಿಕಾರಿಗಳಿಗೆ ದಿನಾಂಕ: 23-07-2024ರಂದು ದೂರು ಸಲ್ಲಿಸಿತ್ತು. ಈ ದೂರನ್ನು ಆಧರಿಸಿ ಸೋಮವಾರಪೇಟೆ ತಹಶೀಲ್ದಾರರು ಮತ್ತು ತಾಲೂಕು ದಂಢಾಧಿಕಾರಿಗಳ ಕಛೇರಿ , ಕಂದಾಯ ಮತ್ತು ಅರಣ್ಯ ಇಲಾಖೆಗಳ ಮೂಲಕ ಜಂಟಿ ಸರ್ವೇಗೆ ಸೂಚಿಸಿತ್ತು. ಈ ಆದೇಶದನ್ವಯ ನಡೆದ ಜಂಟಿ ಸರ್ವೇಯಲ್ಲಿ ಅಂಜನಗೇರಿ ಬೆಟ್ಟಗೇರಿ ಗ್ರಾಮದ ಶ್ರೀ ಬೆಳ್ಳಾರಿಕಮ್ಮ ದೇವಾಲಯಕ್ಕೆ ಸೇರಿದ ಬಸ್ತಿ ದೇವರುಕಾಡು ಮತ್ತು ಅಯ್ಯಪ್ಪ ದೇವರಕಾಡಿನ ಸರ್ವೇ ನಂಬರ್ 79/3, 79/2, 79/5, 79/6, ಮತ್ತು 82 ಗಳಲ್ಲಿ ಒಟ್ಟು 12 ಎಕರೆ 51 ಸೆಂಟ್ಸ್ ಒತ್ತುವರಿಯಾಗಿರುವುದು ದೃಢಪಟ್ಟಿದೆ.

| **ಗ್ರಾಮ** | **ಸರ್ವೆ ನಂ** | **ವಿಸ್ತೀರ್ಣ (ಎಕರೆ ಮತ್ತು ಸೆಂಟ್ಸ್)** | **ಒತ್ತುವರಿದಾರರ ಹೆಸರು** |
|---|---|---|---|
| ಅಂಜನಗೇರಿ ಬೆಟ್ಟಗೇರಿ | 79/3 | 1.28 | - |
| | 79/2 | 4.17 | - |
| | 79/5 | 1.62 | - |
| | 79/6 | 1.56 | - |
| | 82 | 3.88 | - |

ಈ ಮಾಹಿತಿಗೆ ಪೂರಕವಾಗಿ ಸೋಮವಾರಪೇಟೆ ತಹಶೀಲ್ದಾರರ ಕಛೇರಿಯ ದಾಖಲೆಯನ್ನು ಇಲ್ಲಿ ಲಗತ್ತಿಸಲಾಗಿದೆ. ತಹಶೀಲ್ದಾರರ ಕಛೇರಿ ನೀಡಿದ ದಾಖಲೆಗಳಲ್ಲಿ ಒತ್ತುವರಿದಾರರ ಹೆಸರು ದಾಖಲಿಸಿದ ಕಾರಣ ಅದನ್ನು ಇಲ್ಲಿ ನೀಡಲಾಗಿಲ್ಲ.

ಈ ಬೆಳವಣಿಗೆಗಳ ಹಿನ್ನಲೆಯಲ್ಲಿ ಕೊಡಗು ಏಕೀಕರಣ ರಂಗ ಈ ಕೆಳಗಿನ ಬೇಡಿಕೆಗಳನ್ನು ಸಾರ್ವಜನಿಕರು , ಸರಕಾರ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ಹಾಗೂ ಜಿಲ್ಲಾಢಳಿತದ ಮುಂದಿಡುತ್ತಿದೆ.

01. ಭಾಗಮಂಡಲ, ತಾವೂರು ಮತ್ತು ತಣ್ಣಿಮಾನಿ ಗ್ರಾಮಗಳಲ್ಲಿ ಶ್ರೀ ಭಗಂಡೇಶ್ವರ-ತಲಕಾವೇರಿ ದೇವಾಲಯಕ್ಕೆ ಸೇರಿದ ಜಮೀನು ಮತ್ತು ಸೋಮವಾರಪೇಟೆ ತಾಲೂಕು ಅಂಜನಗೇರಿ ಬೆಟ್ಟಗೇರಿ ಗ್ರಾಮದ ಶ್ರೀ ಬೆಳ್ಳಾರಿಕಮ್ಮ ದೇವಾಲಯಕ್ಕೆ ಸೇರಿದ ಬಸ್ತಿ ದೇವರುಕಾಡು ಮತ್ತುಅಯ್ಯಪ್ಪ ದೇವರಕಾಡನ್ನು ಒತ್ತುವರಿ ಮಾಡಿಕೊಂಡಿರುವ ಪ್ರತಿಷ್ಠಿತ ಕುಟಂಬದ ಸದಸ್ಯರಲ್ಲಿ, ಈ ಒತ್ತುವರಿಯನ್ನು ಸ್ವಯಂಪ್ರೇರಿತವಾಗಿಯೇ ತೆರವು ಮಾಡುವಂತೆ ನಾವು ವಿನಮ್ರತೆಯಿಂದ ಮನವಿಮಾಡುತ್ತೇವೆ. ಈ ಬಗ್ಗೆ ಶ್ರೀ ಭಗಂಡೇಶ್ವರ-ತಲಕಾವೇರಿ ದೇವಾಲಯ ಮತ್ತು ಅಂಜನಗೇರಿ ಬೆಟ್ಟಗೇರಿ ಗ್ರಾಮದ ಶ್ರೀ ಬೆಳ್ಳಾರಿಕಮ್ಮ ದೇವಾಲಯದ ತಕ್ಕಮುಖ್ಯಸ್ಥರು, ಜನಪರ ಸಂಘಟನೆಗಳು ಸಾಮಾಜಿಕ ನಾಯಕತ್ವ ವಹಿಸಿ ಒತ್ತುವರಿದಾರರ ಮನವೊಲಿಸುವಂತೆ ಕೋರುತ್ತೇವೆ. ಈ ಬಗ್ಗೆ ನಾವು ಈಗಾಗಲೇ ಕೊಡಗು ಗೌಡ ಸಮಾಜಗಳ ಫೆಡರೇಷನ್, ಕೊಡಗು ಬಂಟರ ಸಂಘ ಮತ್ತು ಬ್ರಾಹ್ಮಣರ ವಿದ್ಯಾ ಅಭಿವೃದ್ದಿ ನಿಧಿಗೆ ಪ್ರತ್ಯೇಕ ಮನವಿ ಸಲ್ಲಿಸಿದ್ದು ತಮ್ಮ ತಮ್ಮ ಜನಾಂಗದ ಪ್ರತಿಷ್ಠಿತರು ಒತ್ತುವರಿ ಮಾಡಿಕೊಂಡಿರುವ ದೇವಾಲಯದ ಜಮೀನು ಮತ್ತು ದೇವರಕಾಡಿನ ಒತ್ತುವರಿಯ ತೆರವಿಗೆ ಮುಂದಾಗುವಂತೆ ಕೋರಿದ್ದೇವೆ.

02. ಭಾಗಮಂಡಲ, ತಾವೂರು ಮತ್ತು ತಣ್ಣಿಮಾನಿ ಗ್ರಾಮಗಳಲ್ಲಿ ಶ್ರೀ ಭಗಂಡೇಶ್ವರ-ತಲಕಾವೇರಿ ದೇವಾಲಯಕ್ಕೆ ಸೇರಿದ ಜಮೀನು ಮತ್ತು ಸೋಮವಾರಪೇಟೆ ತಾಲೂಕು ಅಂಜನಗೇರಿ ಬೆಟ್ಟಗೇರಿ ಗ್ರಾಮದ ಶ್ರೀ ಬೆಳ್ಳಾರಿಕಮ್ಮ ದೇವಾಲಯದ ದೇವರಕಾಡನ್ನು ಒತ್ತುವರಿ ಮಾಡಿರುವವರು ಸ್ವಯಂಪ್ರೇರಿತರಾಗಿ ಒತ್ತುವರಿ ತೆರವುಗೊಳಿಸದಿದ್ದಲ್ಲಿ ಇದೀಗ

ಒತ್ತುವರಿದಾರರ ವಶದಲ್ಲಿರುವ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ತಕ್ಷಣ ಕ್ರಮಕೈಗೊಳ್ಳುವಂತೆ ನಾವು ಸರಕಾರ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಜಿಲ್ಲಾಡಳಿತವನ್ನು ಒತ್ತಾಯಿಸುತ್ತೇವೆ.

03. ಶ್ರೀ ಭಗಂಡೇಶ್ವರ- ತಲಕಾವೇರಿ , ಅಂಜನಗೇರಿ ಬೆಟ್ಟಗೇರಿ ಗ್ರಾಮದ ಶ್ರೀ ಬೆಳ್ಳಾರಿಕಮ್ಮ ದೇವಾಲಯ ಮತ್ತು ಅದಕ್ಕೆ ಸಂಬಂಧಿಸಿದ ದೇವರಕಾಡು ಮತ್ತು ಜಮೀನು ಈ ಜಿಲ್ಲೆಯ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿದೆ. ಒಂದೆಡೆ ಈ ದೇವರುಗಳಿಗೆ ನಡೆದುಕೊಳ್ಳುವುದಾಗಿ ತೋರಿಸಿಕೊಳ್ಳುವ ಪ್ರತಿಷ್ಠಿತ ಕುಟುಂಬದ ಸದಸ್ಯರೇ ದೇವರಿಗೆ ಸೇರಿದ ದೇವರಕಾಡು ಮತ್ತು ಜಮೀನನ್ನು ಒತ್ತುವರಿಮಾಡಿಕೊಳ್ಳುವುದು ಸೋಗಲಾಡಿತನದ ಪರಮಾವಧಿಯಾಗಿದೆ.

04. ಈ ಮೇಲಿನ ಎರಡೂ ದೇವಾಲಯಗಳ ಜಮೀನಿನ ಏರಾಪೇರಿಯಲ್ಲಿ ಅನ್ಯಧರ್ಮೀಯರು ಭಾಗಿಯಾಗಿಲ್ಲ. ಇದರಲ್ಲಿ ಭಾಗಿಯಾದವರು ಹಿಂದೂ ಧರ್ಮದವರೇ ಆಗಿದ್ದಾರೆ. ಈ ಹಿಂದೆ ಶ್ರೀ ಭಗಂಡೇಶ್ವರ ದೇವಾಲಯದ ಜಮೀನಿನ ಒತ್ತುವರಿ ವರದಿ ಸಲ್ಲಿಕೆಯಾದ ನಂತರ ಭಾರತೀಯ ಜನತಾ ಪಕ್ಷದ ಸರಕಾರ ಆಢಳಿತದಲ್ಲಿತ್ತು, ಅದೇ ಪಕ್ಷದ ಶಾಸಕರೂ ಇದ್ದರು. ಆದರೆ ಸುದೀರ್ಘ ಅವಧಿಯಲ್ಲಿ ಭಾರತೀಯ ಜನತಾ ಪಕ್ಷ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ, ಹಿಂದೂ ಜಾಗರಣಾ ವೇದಿಕೆ, , ಶ್ರೀ ಭಗಂಡೇಶ್ವರ- ತಲಕಾವೇರಿ ದೇವಾಲಯದ ಜಮೀನಿನ ಒತ್ತುವರಿಯ ವಿಚಾರದಲ್ಲಿ ಒಮ್ಮೆಕೂಡ ಧ್ವನಿ ಎತ್ತಲಿಲ್ಲ. ಇದು ಧಾರ್ಮಿಕ ಕ್ಷೇತ್ರಗಳಲ್ಲಿ ಹಿಂದೂಗಳು ಅನಾಚಾರ ಎಸಗಿದಲ್ಲಿ ಅದು ಸಮರ್ಥನೀಯ ಆದರೆ ಅನ್ಯಧರ್ಮಿಯರು ಅನಾಚಾರ ಎಸಗುವುದು ಮಾತ್ರ ಅಪರಾಧ ಎಂಬಂತ ವಿತಂಡವಾದವನ್ನು ಪ್ರತಿಪಾದಿಸುವಂತೆ ಕಂಡುಬರುತ್ತಿದೆ. ಈಗಲಾದರೂ ಈ ವಿಚಾರದಲ್ಲಿ ಹಿಂದೂ ಧಾರ್ಮಿಕ ಸ್ಥಳಗಳ ಪಾವಿತ್ರ್ಯತೆಯ ಬಗೆಗಿನ ಸೈದ್ಧಾಂತಿಕ ನಿಲುವಿಗೆ ಬದ್ಧತೆ ತೋರುವಂತೆ ನಾವು ಭಾರತೀಯ ಜನತಾ ಪಕ್ಷ ಮತ್ತು ಸಂಘಪರಿವಾರದ ಸಂಘ ಸಂಸ್ಥೆಗಳನ್ನು ಈ ಮೂಲಕ ಕೋರುತ್ತೇವೆ. ಇಲ್ಲದಿದ್ದಲ್ಲಿ ದೇಶದಾದ್ಯಂತ ತಮ್ಮ ಸಹವರ್ತಿ ಸಂಘಟನೆಗಳು ನಡೆಸುತ್ತಿರುವ ಹೋರಾಟ, ಸಂಘರ್ಷಕ್ಕೆ ಬೆಲೆಯೇ ಇಲ್ಲದಾಗುತ್ತದೆ.

05. ಶ್ರೀ ಭಗಂಡೇಶ್ವರ- ತಲಕಾವೇರಿ ದೇವಾಲಯದ ಜಮೀನು ಮತ್ತು ಅಂಜನಗೇರಿ ಬೆಟ್ಟಗೇರಿ ಗ್ರಾಮದ ಶ್ರೀ ಬೆಳ್ಳಾರಿಕಮ್ಮ ದೇವಾಲಯದ ದೇವರಕಾಡು ಒತ್ತುವರಿಯಾಗಿ ಕಾಫಿ ತೋಟಗಳಾಗಿ , ರೆಸಾರ್ಟಗಳಾಗಿ ಬದಲಾಗುತ್ತಿದ್ದಾಗಲೂ ಕ್ರಮಕೈಗೊಳ್ಳದ ಶ್ರೀ ಭಗಂಡೇಶ್ವರ- ತಲಕಾವೇರಿ ದೇವಾಲಯದ ಕಾರ್ಯನಿರ್ವಹಣಾಧಿಕಾರಿ, ಕುಶಾಲನಗರ ಪ್ರಾದೇಶೀಕ ವಲಯದ ವಲಯ ಅರಣ್ಯಾಧಿಕಾರಿ, ದೇವಾಲಯದ ಜಮೀನಿನಲ್ಲಿ ರೆಸಾರ್ಟ ನಿರ್ಮಿಸಲು ಅನುಮತಿ ನೀಡಿದ ಭಾಗಮಂಡಲ ಗ್ರಾಮಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ದ ಶಿಸ್ತುಕ್ರಮ ಕೈಗೊಳ್ಳುವಂತೆಯೂ ನಾವು ಸರಕಾರವನ್ನು ಒತ್ತಾಯಿಸುತ್ತೇವೆ. .

ವಂದನೆಗಳೊಂದಿಗೆ

ಟಿ.ಎಂ.ಸೋಮಯ್ಯ

ಕಾರ್ಯದರ್ಶಿ